ಭಟ್ಟರ್ ಸ್ಕಾಚ್

- **ನಾಗಶ್ರೀ ಹಿರಣ್ಣಯ್ಯ, ಮೈಸೂರು**
ಭಟ್ರೇ, ನಿಮ್ಮ ಪತ್ರಿಕೆಯಲ್ಲಿ ಹುಡುಗಿಯರಿಗೆ ಮೊದಲ ಪ್ರಾಶಸ್ತ್ಯ ಅಂತೆ ನಿಜವಾ?
– ನನ್ನನ್ನು ಮಹಿಳಾ ವಿರೋಧಿ ಎನ್ನುವವರಿಗೆ ಇದನ್ನು ತಿಳಿಸಬೇಕಿತ್ತು!

- **ಭಾರತ ಕುಮಾರ ಎಚ್., (ಇಮೇಲ್ ಮೂಲಕ)**
ಭಟ್ರೇ, ನಿಮ್ಮ ಬರಹವನ್ನು ನೀವೇ ಓದುವುದಿಲ್ಲವಂತೆ?
– ನೀವು ಓಡಿಸುವ ಕಾರಿನಲ್ಲಿ ನೀವು ಕುಳಿತುಕೊಳ್ಳುವುದಿಲ್ಲವಂತೆ ಅಂತ ಹೇಳಿದಂಗಾಯ್ತು!

- **ಸ್ವಾತಿ, ಮಲ್ಲೇಶ್ವರ**
ಭಟ್ರೇ, ನಿಮ್ಮನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಅಂತಾರಲ್ಲ?
– ಕಷ್ಟವಾಗಿದ್ದರೆ ಕಿರಣ್ ಉಪಾಧ್ಯಾಯ 'ವಿಶ್ವತೋಮುಖ' ಪುಸ್ತಕ ಬರೆಯುತ್ತಿದ್ರಾ?!

- **ಮಮತಾ ಹಿರೇಮಗಳೂರು, ಬೆಂಗಳೂರು**
ಭಟ್ರೇ, ರಾಹುಲ್ ಗಾಂಧಿಗೆ ನಮ್ಮ ಶಿಷ್ಟಾಚಾರಗಳನ್ನು ಹೇಗೆ ತಿಳಿಸುವುದು?
– ತೀರ್ಥವನ್ನು ಗುಟಖಾ ಎಂದು ಭಾವಿಸಿದವನಿಗೆ ಏನು ತಿಳಿಸ್ತೀರಿ?!

- **ರಾಜು ಪತ್ತಾರ, ಹುಬ್ಬಳ್ಳಿ**
ಸಾರ್, ಪ್ರೀತಿಯಲ್ಲಿ ನಾಲಗೆ ಸುಟ್ಟಿಕೊಂಡಿದ್ದೇನೆ ಎಂದು ಹೇಳ್ತಾಳಲ್ಲ?
– ಪ್ರೀತಿಯನ್ನು ಬಿಸಿ ಕಾಫಿ ಎಂದು ಭಾವಿಸಿದಳಾ ?

- **ಲಾವಣ್ಯ ಗೌಡ, ಪದ್ಮನಾಭನಗರ**
ಭಟ್ರೇ, ನಿಮ್ಮನ್ನು ಭೇಟಿ ಮಾಡುವ ಶೀಘ್ರ ಮತ್ತು ಸುಲಭ ವಿಧಾನ ಯಾವುದು?
– ಕನಸಿನಲ್ಲಿ!

- **ನಾರಾಯಣ ತಂತ್ರಿ, ಧಾರವಾಡ**
ಸಾರ್, ಕೆಲವರು ಮೂರು ಫೋನ್ ಇಟ್ಕೋತಾರೆ, ಅವರು ಹೇಗೆ ಮೆಂಟೇನ್ ಮಾಡ್ತಾರೆ?
– ಬಿಡ್ತು ಅನ್ನು, ಮೂರು ಹೆಂಡಿರನ್ನು ಇಟ್ಟುಕೊಂಡವರ ಬಗ್ಗೆ ಯೋಚಿಸಿದ್ದೀಯಾ?!

- **ರಘುರಾಮ ಭಟ್, ಹೊನ್ನಾವರ**
ಭಟ್ರೇ, ಸಿದ್ದರಾಮಯ್ಯನವರನ್ನು ಡಿಕೆಶಿ ಆಲಂಗಿಸಿದಾಗ ಏನು ಏನನಿಸಿತು?
– ಸಿದ್ದರಾಮಯ್ಯನವರು ಅದೇನು ಪಾಪ ಮಾಡಿದ್ದಾರೋ ಅನಿಸ್ತು!

- **ಮೈಸೂರು ನಾಗರಾಜ, ಮೈಸೂರು**
ಸಾರ್, ಬೊಮ್ಮಾಯಿ ಅವಧಿ ಪೂರ್ಣಗೊಳಿಸುತ್ತಾರಾ?
– ಈ ಪ್ರಶ್ನೆಗೆ ಉತ್ತರ ಗೊತ್ತಿರೋದು ಮೋದಿಯವರಿಗೆ ಮಾತ್ರ!

- **ಪರಶುರಾಮ ದಾಮ್ಲೆ, ಹುಬ್ಬಳ್ಳಿ**
ಭಟ್ರೇ, ಪ್ರಗತಿಪರರೆಲ್ಲ ನಿಮ್ಮ ಪರ ಅಂತ ಕನಸು ಬಿದ್ದಿತ್ತು?
– ಇದು ಪ್ರಶ್ನೆಯಲ್ಲ, ನಿಮ್ಮ ಕನವರಿಕೆ!

ಯೋಗೀಜಿ ಮಾಡೆಲ್ ರೀಮೇಕ್ ಸಿನಿಮಾವಲ್ಲ

ಕಾರ್ಯಕರ್ತರು ತಮ್ಮದೇ ಸರಕಾರ ಮತ್ತು ಪಕ್ಷದ ವಿರುದ್ಧ ನಿರಾಶೆ ಅಸಮಧಾನಗೊಂಡು ತಮ್ಮ ಹುದ್ದೆಗೆ ರಾಜೀನಾಮೆ ನೀಡುತ್ತಿರುವಾಗ ಹೆಜ್ಜೆಹೆಜ್ಜೆಗೂ ಬಾಹುಬಲಿಯ ಕಟ್ಟಪ್ಪನಂತೆ ಬಿಜೆಪಿ ಸಾಮ್ರಾಜ್ಯದ ಹಿತಚಿಂತಕರಾಗಿ ಒಳಗೊಳಗೇ ಕೆಲಸಮಾಡುವ ಮೇಧಾವಿಗಳು ಎಲ್ಲಿ ಅಡಗಿಕೊಂಡಿದ್ದಾರೆ? ಸಂತೋಷ್‌ಜೀ ಅವರಾಗಲಿ, ಸಂಘಪರಿ ವಾರದ ಹಿರಿಯರಾಗಲಿ ಅವರ ಸಿದ್ಧಾಂತ- ವಿಚಾರಧಾರೆಗಳ ಕುರಿತು ಗೌರವವಿದೆ.

ಹಂಪಿ ಎಕ್ಸ್‌ಪ್ರೆಸ್

ದೇವಿ ಮಹೇಶ್ವರ ಹಂಪಿನಾಯ್ಡು

1336hampiexpress1509@gmail.com

ಹಿಂಸೆ ಗಲಭೆ ಕೃತ್ಯಗಳಲ್ಲಿ ಭಾಗಿಯಾಗಿದ್ದವರ ಆಸ್ತಿ ನೆಲಸಮಕ್ಕೆ ಬುಲ್ಡೋಜರ್ ಬದಲು ಓಮ್ನಿ ಕಾರು ಬಳಸುವಂತೆ ಆದೇಶಿಸಲು ಸಾಧ್ಯವೇ? ಕಾನೂನು ನಿಯಮಗಳ ಪಾಲನೆಯನ್ನು ಯಾರೂ ಆಕ್ಷೇಪಿಸಲಾಗದು. ಈ ಕುರಿತು ಮಧ್ಯಂತರ ಆದೇಶ ನೀಡಲು ಸಾಧ್ಯವೇ? ಹಾಗೆ ಆದೇಶ ನೀಡಿದರೆ ಕಾನೂನು ಕ್ರಮಕೈಗೊಳ್ಳದಂತೆ ಸ್ಥಳೀಯ ಆಡಳಿತವನ್ನು ತಡೆದಂತಾಗುವುದದಲ್ಲವೇ?

ಈ ಮಾತನ್ನು ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಪಿ.ಎಸ್ ನರಸಿಂಹ ಅವರಿದ್ದ ಪೀಠ ಹೇಳಿದೆ. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರಿಂದ ಅವಿಷ್ಕಾರಗೊಂಡ 'ಬುಲ್ಡೋಜರ್ ಕಾರ್ಯಾಚರಣೆ' ಮತ್ತು ಅದರಿಂದ ಪ್ರೇರಣೆಗೊಂಡ ಇನ್ನಿತರೆ ರಾಜ್ಯಗಳು ಈ ಕಾನೂನನ್ನು ಬಳಸದಿರಲು ಮಧ್ಯಂತರ ತಡೆಯಾಜ್ಞೆ ನೀಡಬೇಕೆಂದು ಕೋರಿರುವ ಜಮಾಯತ್ ಉಲಮಾ-ಐ-ಹಿಂದ್ ಸೇರಿ ಹಲವು ಸಂಘಟನೆಗಳು 'ಒಂದು ನಿರ್ದಿಷ್ಟ' ಸಮುದಾಯದ ವಿರುದ್ಧವೇ ಈ ಕ್ರಮ ಹೆಚ್ಚಾಗಿದೆ ಎಂದು ವಾದಿಸಿತ್ತು. ವಾದ ಆಲಿಸಿದ ದ್ವಿಸದಸ್ಯರ ನ್ಯಾಯಪೀಠ, 'ನಿರ್ದಿಷ್ಟ ಸಮುದಾಯ' ಪದ ಬಳಕೆಗೆ ಆಕ್ರೋಶ ವ್ಯಕ್ತಪಡಿಸಿ 'ದೇಶದಲ್ಲಿ ಇರುವುದು ಭಾರತೀಯ ಸಮುದಾಯವೊಂದೇ' ಎಂದು ಎಚ್ಚರಿಕೆ ನೀಡಿತ್ತು.

ಇದು, ಅಸಮಾನ್ಯ ಬದ್ಧತೆ ಇರುವ ಒಬ್ಬ ಮುಖ್ಯಮಂತ್ರಿಗೂ ಮತ್ತು ಟಿಪಿಕಲ್ ರಾಜಕಾರಣಿಗಳಿಗೂ ಇರುವ ವ್ಯತ್ಯಾಸ. ತನ್ನ ಯವ್ವನದ 22ನೇ ವಯಸ್ಸಿಗೇ ನಾಥ ಪಂಥದ ಸನ್ಯಾಸತ್ವ ಸ್ವೀಕರಿಸಿ ಯೋಗಿ ಆದಿತ್ಯನಾಥರಾದರು. ಶೈವಸಂಪ್ರದಾಯ ಸಂಯೋಜಿತ ಈಶ್ವರ, ಭೈರವ, ದತ್ತಾತ್ರೇಯನನ್ನು ಮುಖ್ಯವಾಗಿ ಪೂಜಿಸುವ ನಾಥ ಪಂಥದ ಮೂಲ ಉತ್ತರಭಾರತದ ಘೋರಕಪುರ. ಕರ್ನಾಟಕದಲ್ಲಿ ಈ ಪಂಥದ ಪ್ರಭಾವ ಸಾಕಷ್ಟಿದ್ದು ಮಂಗಳೂರಿನ ಕದರಿ ಮಂಜುನಾಥ ಮತ್ತು ಒಕ್ಕಲಿಗ ಸಮುದಾಯ ಆರಾಧಿಸುವ ಆದಿಚುಂಚನಗಿರಿನಾಥ ಈ ಪಂಥದ ಪ್ರಾಚೀನ ಪ್ರಸಿದ್ಧ ಕೇಂದ್ರಗಳು. ಇಲ್ಲಿಯೂ ಆರಾಧನೆಯಾಗುವುದು ಕಾಲಭೈರವೇಶ್ವರನೇ. ಇಲ್ಲಿನ ಮಠದ ಸ್ವಾಮಿಗಳು ಇಂದೂ 'ನಾಥ' ಎಂಬ ಹೆಸರು ಹೊಂದಿದ್ದು ಬಾಲಗಂಗಾಧರನಾಥ, ನಿರ್ಮಲಾನಂದನಾಥ, ಸೌಮ್ಯನಂದನಾಥರಾಗಿ ನಾಥ ಪಂಥದವರಾಗಿದ್ದಾರೆ. ಇದರ ಕುರಿತು ಹಿರಿಯ ಹಿತಿಹಾಸಕಾರ ಡಾ.ಸೂರ್ಯನಾಥ ಕಾಮತ್ ಅವರು ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಮೊನ್ನೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಯುಪಿ ಮಾಡಲನ್ನು ತೆಗಳುವ ಭರದಲ್ಲಿ ಯೋಗಿಜೀ ಬಗ್ಗೆ ಬಾಯ್ತಪ್ಪುತ್ತಿದ್ದರು. ಹಿಂದೆ ದಿನೇಶ್‌ಗುಂಡೂರಾವ್ ಯೋಗಿಜೀಗೆ ಚಪ್ಪಲಿಯಲ್ಲಿ ಹೊಡೆಯಬೇಕೆಂದು ನಾಲಿಗೆ ಹರಿಬಿಟ್ಟು ಒಕ್ಕಲಿಗ ಸಮುದಾಯದ ಕೆಂಗೆಣ್ಣಿಗೆ ಗುರಿಯಾಗಿದ್ದರು.

ಮುಖ್ಯವಾಗಿ ಮೇಟಿ ಭದ್ರವಾಗಿರಬೇಕು. ಉತ್ತರಪ್ರದೇಶದಲ್ಲಿ ಇಡೀ ಸರಕಾರವನ್ನು ಮುಖ್ಯಮಂತ್ರಿ ಯೋಗಿಜೀ ಆವರಿಸಿಕೊಂಡಿದ್ದಾರೆ. ಸರಕಾರದ ಸ್ಟೇರಿಂಗ್ ಅವರ ಕೈಯಲ್ಲೇ ಇದ್ದು ಅವರೇ ಚಾಲಕರಾಗಿ ರಾಜ್ಯವನ್ನು ಮುನ್ನಡೆಸುತ್ತಿದ್ದಾರೆ. ಆದ್ದರಿಂದಲೇ ಅವರು ಮತ್ತೊಮ್ಮೆ ಜನಾದೇಶ ಪಡೆದು ಮುಂದೊರೆದಿದ್ದಾರೆ. ಅದಕ್ಕೆ ತಕ್ಕಂತೆ ಜನಗಳ ನಂಬಿಕೆ ವಿಶ್ವಾಸಗಳಿಗನುಸಾರ ಮತಾಂತರ, ಗೋಹತ್ಯೆ, ಲವ್ ಜೀಹಾದ್ ನಿಷೇಧ ಕಾನೂನುಗಳನ್ನು ಜಾರಿಗೆ ತಂದು ಅದನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ತಮ್ಮ ಸರಕಾರದ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ಕಾನೂನು ತಜ್ಞರನ್ನು ಗುಡ್ಡೆ ಹಾಕಿಕೊಂಡು ನಮಗಿರುವ ಸಂವಿಧಾನ ಕಾನೂನು ಕಾಯ್ದೆಗಳನ್ನೇ ಹತ್ತುಬಾರಿ ಪರಾಮರ್ಶಿಸಿ ಅದರೊಳಗಿಂದಲೇ ಇಂಥ ಬುಲ್ಡೋಜರ್ ಕಾನೂನನ್ನು ರಸ್ತೆಗಿಳಿಸಿದ್ದಾರೆ. ಆ ಮೂಲಕ ದುಷ್ಕೃತ್ಯದಲ್ಲಿ ಭಾಗಿಯಾಗುವ ಗಲಭೆಕೋರರು ರೌಡಿಗಳ ಗ್ರಹಚಾರ ಬಿಡಿಸಿದ್ದಾರೆ. ಅದರಲ್ಲೂ ಕೋಮು ಗಲಬೆ ಎಂಬುದು ಕಿಡಿಗೇಡಿಗಳಿಗೆ ಮರಣಶಾಸನವೆಂಬಂತಾಗಿದೆ. ಹೀಗಾಗಿ ಅಪರಾಧವೆಸಗಿದ ದುಷ್ಕರ್ಮಿಗಳು ತಮ್ಮ ಮನೆಯ ಮುಂದೆ ಬುಲ್ಡೋಜರ್ ಬಂದು ನಿಲ್ಲುವ ಮೊದಲೇ ಪೊಲೀಸ್ ಠಾಣೆ ತಲುಪಿ ಶರಣಾಗುತ್ತಿದ್ದಾರೆ. ಒಂದು ಮೂಲದ ಪ್ರಕಾರ ಅಲ್ಲಿ ಎಲ್ಲ ಬಗೆಯ ಕ್ರೈಂಗಳು ಅಪರಾಧಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಮುಖ್ಯಮಂತ್ರಿಗಳ ಇಂಥ ಜಾಣ್ಮೆ ನೋಡಿಯೇ ಮೇಲಿನಂತೆ ಸಾಕ್ಷಾತ್ ಸುಪ್ರೀಂ ಕೋರ್ಟೇ ಬುಡ್ಡೋಜರ್ ಕ್ರಮಕ್ಕೆ ತಲೆದೂಗಿ ತಡಯಾಜ್ಞೆ ನೀಡಲು ನಿರಾಕರಿಸಿದೆ.

ಇದು ಒಬ್ಬ ಮುಖ್ಯಮಂತ್ರಿಗಿರಬೇಕಾದ 'ತಲೆ' ಮತ್ತು ಗಂಡೆದೆ. ಆದರೆ, ನಮ್ಮ ರಾಜ್ಯದ ಬಿಜೆಪಿ ಸರಕಾರವನ್ನು ನೋಡಿದರೆ ಒಬ್ಬರಾದರೂ ಆದಿತ್ಯನಾಥರಂತೆ ಬದ್ಧತೆ, ಸೈದ್ಧಾಂತಿಕತೆ, ಎದೆಗಾರಿಕೆಯುಳ್ಳ ಮುಖ ಕಾಣಸಿಗುತ್ತಿಲ್ಲ. ಅದರಲ್ಲೂ ಗೃಹಮಂತ್ರಿಗಿರಬೇಕಾಗಿದ್ದ ಇಂಥ ಚಾಣಾಕ್ಷತೆಯ ನಯಾಪೈಸೆಯಿಲ್ಲ. ಇನ್ನು ಯಡಿಯೂರಪ್ಪನವರಿಗೆ ಸ್ಟೇರಿಂಗ್ ಕೊಟ್ಟರೂ ಕ್ಲಚ್ ಬ್ರೇಕ್ ಕೊಡದೆ ಸತಾಯಿಸಿ ಕೆಳಗಿಳಿಸಲಾಯಿತು. ಈಗಿರುವ ಬಸವರಾಜ ಬೊಮ್ಮಾಯಿಯವರನ್ನು ಗಮನಿಸಿ ನೋಡಿ ಅವರು ಪರಿಪೂರ್ಣ ಮುಖ್ಯಮಂತ್ರಿಯಾಗಿ ಪರಕಾಯ ಪ್ರವೇಶ ಮಾಡಿಯೇ ಇಲ್ಲ. ಕೇವಲ ಮುಖ್ಯಮಂತ್ರಿ ಪಾತ್ರವನ್ನು ರಿಹರ್ಸಲ್ ಮಾಡುತ್ತಿರುವಂತಿದೆ. ಪಾಪ ಅವರಿಗೆ ಆಡಳಿತ ಮಾಡುವುದಕ್ಕಿಂತ ಕೇಂದ್ರ ನಾಯಕರನ್ನು ಒಲಿಸಿಕೊಳ್ಳುವುದೇ ಒಂದು ಸವಾಲು. ಗೃಹಸಚಿವ ಆರಗಜ್ಞಾನೇಂದ್ರರನ್ನು ನೋಡುತ್ತಿದ್ದರೆ ಗೃಹಮಂತ್ರಿಯಂತೆ ಕಾಣುವುದಿರಲಿ, ಸಿನಿಮಾದಲ್ಲಿ ನಾಯಕಿಯ ಪ್ರೀತಿಯನ್ನು ಧಿಕ್ಕರಿಸುವ ತಂದೆಯ ಪಾತ್ರಕ್ಕೂ ಹೊಂದಿಕೆಯಾಗದಂತಿದೆ.

ಆರ್.ಅಶೋಕ್, ಡಾ.ಅಶ್ವತ್ಥ ನಾರಾಯಣ್, ಶ್ರೀರಾಮುಲುರಂಥ ಮೂಲ ಬಿಜೆಪಿ ಮುಖಗಳನ್ನು ನೋಡುತ್ತಿದ್ದರೆ ಬಿಜೆಪಿ ಕಾರ್ಯಕರ್ತರು ಇವರಿಗೆ ಬಾಗಿನ ಕೊಟ್ಟು, ಅರಿಶಿಣಕುಂಕುಮ ತಾಂಬೂಲ ನೀಡಿ ಮಡಿಲು ತುಂಬಿಸಬೇಕಷ್ಟೇ! ಇನ್ನು ಅನ್ಯ ಪಕ್ಷಗಳಿಂದ ವಲಸೆ ಬಂದಿರುವ ಸಚಿವರ ಮನಸ್ಥಿತಿ ಹೇಗಿದೆಯೆಂದರೆ 'ಈಗೆಲ್ಲ ಹಿಂದುತ್ವ, ರಾಷ್ಟ್ರೀಯತೆ, ಆರ್‌ಎಸ್‌ಎಸ್ ಎಂದು ಸಮರ್ಥಿಸಿಕೊಂಡು ಕೂತರೆ ನಾಳೆ ಬಿಜೆಪಿ ಮಕಾಡೆ ಮಲಗಿದರೆ ಮತ್ತೇ ತಮ್ಮ ಮಾತೃಪಕ್ಷಗಳ ಕದತಟ್ಟಲು ಕಷ್ಟವಾಗುತ್ತದೆ' ಎಂಬ ಎಚ್ಚರಿಕೆಯಲ್ಲಿದ್ದಂತಿದೆ. ಗೋಪಾಲಯ್ಯ, ಎಂಟಿಬಿ ನಾಗರಾಜ್ ಇಂಥವರಿಂದ ಕಠೋರ ಹಿಂದುತ್ವ ನಿರೀಕ್ಷಿಸಲು ಸಾಧ್ಯವೇ? ಅಂಥದನ್ನು ಪ್ರತಿಪಾದಿಸುವ ಬಸವನಗೌಡ ಯತ್ನಾಳ್ ಪಾಟೀಲ್, ಸಂಸದ ಅನಂತಕುಮಾರ್ ಹೆಗಡೆ ಅಂಥವರನ್ನು ಬಾಯಿಮುಚ್ಚಿ ಕೂರಿಸಲಾಗಿದೆ. ಇರುವಷ್ಟರಲ್ಲಿ ಸಂಸದ ಪ್ರತಾಪ್ ಸಿಂಹ, ಸಿ.ಟಿ.ರವಿ ಹೊರತು ಪಡಿಸಿದರೆ ಬಿಜೆಪಿಯ ಸಹಜ ಸಿದ್ಧಾಂತ ಅದರ ಯಾವ ನಾಯಕನಿಗೂ ಬೇಡವಾಗಿದೆ.

ಚಿತ್ರರಂಗದಲ್ಲಿ ಐರನ್‌ಲೆಗ್ ಎಂಬ ಪದವಿದೆ. ನೋಡುವುದಕ್ಕೆ ಹೀರೋ ಲಕ್ಷಣಗಳಿದ್ದರೂ ಆತನ ಸಿನಿಮಾಗಳು ಓಡುವುದೂ ಇಲ್ಲ, ಹಣಗಳಿಸುವುದೂ ಇಲ್ಲ. ಹಾಗೆಯೇ ಈಗಿನ ಸರಕಾರ ಹೇಳಿಕೊಳ್ಳುವುದಕ್ಕೆ ಮಾತ್ರ ಬಿಜೆಪಿ ಸರಕಾರ, ಹಿಂದುತ್ವದ ಸರಕಾರ, ಡಬಲ್ ಎಂಜಿನ್ ಸರಕಾರವಷ್ಟೇ. ಇಲ್ಲಿರುವ ಎಂಜಿನ್ನೇ ಸದ್ದು ಮಾಡುತ್ತಿಲ್ಲ, ಕಾರ್ಯಕರ್ತರು ಹೇಳಿಕೊಳ್ಳಲು ಮಾತ್ರ ಕೇಂದ್ರದಲ್ಲಿ ದೇಶಾಭಿಮಾನದ ತಳಹದಿಯಲ್ಲಿರುವ ಮೋದಿಜಿಯವರ ಸರಕಾರವಿದೆ, ಅವರದ್ದೇ ಬಿಜೆಪಿ ಸರಕಾರ ನಮ್ಮ ನಾಡಿನಲ್ಲೂ ಇದೆ. ನಮ್ಮದು ಕಾರ್ಯಕರ್ತರ ಪಕ್ಷವೆಂದು ಬಿಜೆಪಿ ನಾಯಕರಲ್ಲ ಹೇಳಿಕೊಳ್ಳುತ್ತಿದ್ದಾರೆ ಎಂದು ಸಂಭ್ರಮಿಸಬೇಕಷ್ಟೆ. ಆದರೆ ಅಂಥ ಯಾವ ನೈಜತೆಯ ಲಕ್ಷಣಗಳೂ ರಾಜ್ಯ ಸರಕಾರದಲ್ಲಿ ಗೋಚರಗೊಂಡಿಲ್ಲ.

ನಮ್ಮಲ್ಲಿ ಹೇಳಿಕೊಳ್ಳುವುದಕ್ಕೆ ಗೋಹತ್ಯೆ ನಿಷೇಧ ಕಾನೂನು ತರಲಾಯಿತು. ಅದರ ಕಾನೂನಿನ ಸೂತ್ರದಲ್ಲಿ ಅದೆಷ್ಟು ಗೋವುಗಳ ಹತ್ಯೆಯನ್ನು ತಡೆದಿದ್ದಾರೆ? ಅದೆಷ್ಟು ಗೋಕಳ್ಳರನ್ನು ಗೋಹಂತಕರನ್ನು ಜೈಲಿಗೆ ಅಟ್ಟಿದ್ದಾರೆ? ಅಂದಿಗೂ, ಇಂದಿಗೂ ಗೋವುಗಳ ಹಣೆಬರಹ ಮಾತ್ರ ಬದಲಾಗಲಿಲ್ಲ.



ಇನ್ನು ಮತಾಂತರ ನಿಷೇಧ ಕಾಯಿದೆ ವಿಧಾನ ಸಭೆಯಲ್ಲಿ ಮಂಡಿಸುವುದಕ್ಕೇ ಹರಸಾಹಸ ಪಟ್ಟು ಅನುಮೋದನೆ ಪಡೆದರೂ ವಿಧಾನ ಪರಿಷತ್ತಿನಲ್ಲಿ ಮಂಡಿಸುವ ಪ್ರಯತ್ನ ಮಾಡದೆ ಕೈಬಿಟ್ಟರು. ಈಗ ಮಾತೆತ್ತಿದರೆ ಯೋಗಿಜೀ ಮಾಡೆಲ್ ತರುತ್ತೇವೆ, ಯುಪಿ ಮಾಡೆಲ್ ತರುತ್ತೇವೆ ಎನ್ನುತ್ತಾರೆ. ಅದೇನು ಸಿನಿಮಾನಾ, ಕನ್ನಡದಲ್ಲೂ ತೆಗೆಯುತ್ತೇವೆ ಎನ್ನುವುದಕ್ಕೆ. ಸಚಿವ ಡಾ.ಅಶ್ವತ್ಥ್‌ನಾರಾಯಣ್ ಯೋಗಿಜಿಗಿಂತ ಮುಂದೆ ಹೋಗಿ ಕೊಲೆಗಡುಕರ ಎನ್‌ಕೌಂಟರ್ ಮಾಡುತ್ತೇವೆಂದು ಹೇಳುತ್ತಾರೆ. ಎಂಥ ಸಿನಿಮಾ ಡೈಲಾಗ್ ಅಲ್ಲವೇ? ಮಾತನಾಡಿದರೆ ಗೋಡೆಗೆ ಮೊಳೆ ಹೊಡೆದಂತಿರಬೇಕು. ಆದರೆ ಇವರ ಡೈಲಾಗ್‌ಗಳು ಆಕ್ಷನ್ ಕಟ್‌ಗೆ ಸೀಮಿತವಾದಂತಿದೆ.

ಇನ್ನು ಕೇಂದ್ರದ ನಾಯಕರಿಗೆ ಬೊಮ್ಮಾಯಿಯವರನ್ನೂ ಕೆಳಗಿಳಿಸಿದರೆ ಬಿಜೆಪಿ ನೆಚ್ಚಿಕೊಂಡಿರುವ ಲಿಂಗಾಯತ ವೀರಶೈವ ಸಮುದಾಯ ಎಲ್ಲಿ ದೂರವಾಗುತ್ತದೋ ಎಂಬ ಭಯ. ಇನ್ನೊಂದು ಕಡೆ ಕಾಂಗ್ರೆಸ್ ಪಕ್ಷದ ಒಂದು ಕೂಟ ವೀರಶೈವ ಲಿಂಗಾಯದ ಸಮುದಾಯವನ್ನು ಹಿಂದೂಧರ್ಮದಿಂದ ಹೈಜಾಕ್ ಮಾಡಿ 'ಸ್ವಧರ್ಮ' ಸ್ಥಾಪಿಸಿ ಶಾಶ್ವತವಾಗಿ ಹಿಂದುತ್ವವನ್ನು ಬಿಜೆಪಿಯನ್ನು ಹಿಂದಕ್ಕೆ ದೂಡುವ ಅಪಾಯಕಾರಿ ಪ್ರಯತ್ನದಲ್ಲಿದೆ. ಈಗೇನೋ ಉತ್ತರಕರ್ನಾಟಕಲ್ಲಿ ವೀರಶೈವ ಸಮುದಾಯದ ಬಲದಿಂದ ಬಿಜೆಪಿ ಬಲಿಷ್ಠವಾಗಿದೆ. ಒಂದೊಮ್ಮೆ ಹಿಂದೂಧರ್ಮ ಭಂಜಕರು ಯಶಸ್ವಿಯಾದದ್ದೇ ಆದರೆ ಆಗ ಯಾವ ಮಠಗಳೂ ಬಿಜೆಪಿಯೊಂದಿಗೆ ನಿಲ್ಲುವುದಿಲ್ಲ. ಆಗ ಬಿಜೆಪಿ ಮತ್ತು ಅದರ ಹಿಂದುತ್ವದ ಬೇಳೆ ಬೇಯುವುದು ಮಲೆನಾಡು- ಕರಾವಳಿಯಲ್ಲಿ ಮಾತ್ರ. ಆದರೀಗ ಅಲ್ಲೂ 'ಕಠಿಣ ಕ್ರಮ' ಪದವನ್ನು ಬಳಸಿ ಅಲ್ಲಿಯ ಕಾರ್ಯಕರ್ತರೂ ದಂಗೆ ಎಳುವಂತೆ ಮಾಡಿಕೊಂಡಿದ್ದಾರೆ ಈಗಿನ ಮಹಾನ್ ಬಿಜೆಪಿ ನಾಯಕರು.

ಇನ್ನು ಬಿ.ಎಲ್.ಸಂತೋಷ್‌ಜೀಯಂಥ ಬಿಜೆಪಿಯ ಒಳಚಿಂತಕರು ಹೀಗೆಲ್ಲಿ ಮರೆಯಾಗಿದ್ದಾರೆ? ಕಾರ್ಯಕರ್ತರು ತಮ್ಮದೇ ಸರಕಾರ ಮತ್ತು ಪಕ್ಷದ ವಿರುದ್ಧ ನಿರಾಶೆ ಅಸಮಧಾನಗೊಂಡು ತಮ್ಮ ಹುದ್ದೆಗೆ ರಾಜೀನಾಮೆ ನೀಡುತ್ತಿರುವಾಗ ಹೆಜ್ಜೆಹೆಜ್ಜೆಗೂ ಬಾಹುಬಲಿಯ ಕಟ್ಟಪ್ಪನಂತೆ ಬಿಜೆಪಿ ಸಾಮ್ರಾಜ್ಯದ ಹಿತಚಿಂತಕರಾಗಿ ಒಳಗೊಳಗೇ ಕೆಲಸಮಾಡುವ ಮೇಧಾವಿಗಳು ಎಲ್ಲಿ ಅಡಗಿಕೊಂಡಿದ್ದಾರೆ? ಸಂತೋಷ್‌ಜೀ ಅವರಾಗಲಿ, ಸಂಘಪರಿವಾರದ ಹಿರಿಯರಾಗಲಿ ಅವರ ಸಿದ್ಧಾಂತ- ವಿಚಾರಧಾರೆಗಳ ಕುರಿತು ಗೌರವವಿದೆ. ತೆರೆಮರೆಯಲ್ಲಿ ಕೂತು ಅವರನ್ನು ಇಳಿಸಿ ಇವರನ್ನು ಏರಿಸಿ ಎಂದು ಕಟ್ಟಪ್ಪಣೆ ನೀಡುತ್ತ ಕೂರುವುದಲ್ಲ. ಇಂಥ ಸಮಯದಲ್ಲಿ ಪಲಾಯನವಾದಿಗಳಾಗದೇ ಹೊಣೆಗಾರಿಕೆ ತೋರಬೇಕಿದೆ. ಸರಕಾರವೆಂಬುದು ಸಂವಿಧಾನಾತ್ಮವಾದದ್ದು. ಅದನ್ನು ಸ್ಥಾಪಿಸಿದ ಬಹುಮತದಾರರ ದನಿಗೆ ತಕ್ಕಂತೆ ನಡೆದುಕೊಂಡು ಅವರ ಆಶೋತ್ತರಗಳನ್ನು ನೆರವೇರಿಸಬೇಕು. ರಾಜ್ಯವನ್ನು ದೇಶದೊಂದಿಗೆ ಕಟ್ಟುವ ಕೆಲಸವನ್ನು ಯಾರಾದರೂ ಮಾಡಲೇಬೇಕು. ಅದಕ್ಕಾಗಿ ಸಮರ್ಥ ಕಾನೂನು ಜಾರಿಗೆ ತಂದು ಕೆಲಸ ಮಾಡುವ ಬುದ್ಧಿವಂತಿಕೆ ಜಾಣ್ಮೆ, ಮಿಗಿಲಾಗಿ ಇಚ್ಛಾಶಕ್ತಿ ಇರುವ ಗಂಡೆದೆಯ ಮಂತ್ರಿಗಳು ಬೇಕಿದೆ.

ಇದನ್ನು ಉತ್ತರಪ್ರದೇಶದಲ್ಲಿ ಒಬ್ಬ ಸನ್ಯಾಸಿ ಮಾಡುತ್ತಿರುವಾಗ ರಾಜ್ಯದ ರಂಗನಾಯಕರಿಗೇನು ಬಾಧೆ? ಮೊದಲಿಗೆ ನಮ್ಮ ಸರಕಾರ, ನಮ್ಮ ಪ್ರಜೆಗಳು, ನಮ್ಮ ಪಕ್ಷವೆಂಬ ಸ್ವಾಭಿಮಾನ ಸರಕಾರದ ಸಚಿವರಿಗೆ. ನಾಯಕರಿಗೆ ಇರದೇ ಹೋದರೆ ಹೀಗೆಲ್ಲ ಆಗುತ್ತದೆ. ರಾಜ್ಯ ಬಿಜೆಪಿಗರು ಎಂಥ ದುರ್ಗತಿಯಲ್ಲಿದ್ದಾರೆಂದರೆ ಈಗಷ್ಟೇ ಚಿಗುರುತ್ತಿರುವ ಆಪ್ ಪಕ್ಷವೂ ಬಿಜೆಪಿ ಸರಕಾರದ ಶೇ.40 ಕಮಿಷನ್ ಮತ್ತು ಭ್ರಷಾಚಾರದ ಕುರಿತು 'ಬಿಜೆಪಿ ಬೊಗಳೆ ಆಡಳಿತ' ಎಂಬ ಪುಸ್ತಕವನ್ನೇ ಬಿಡುಗಡೆ ಮಾಡಿದೆ. ಸಾರ್ವತ್ರಿಕ ಚುನಾವಣೆಗೆ ಒಂಬತ್ತು ತಿಂಗಳಿದೆ . ಈಗಾಗಲೇ ಮುಂದಿನ ಚುನಾವಣೆಯನ್ನೂ ನರೇಂದ್ರ ಮೋದಿಯವರ ನೇತೃತ್ವದಲ್ಲೇ ನಡೆಸಲು ಘೋಷಣೆಯಾಗಿರುವುದರಿಂದ ಬರಿಯ ಅವರ ಹೆಸರನ್ನು ಇಟ್ಟುಕೊಂಡು ಅಸಮರ್ಥರೆಲ್ಲ ಅದೇ ಮುಖಗಳನ್ನಿಟ್ಟುಕೊಂಡು ಆರತಕ್ಷತೆ ಕಾರ್ಯಕ್ರಮಕ್ಕೆ ರೆಡಿಯಾಗುವ ಮಹಿಳೆಯರಂತೆ ಜರತಾರಿ ಸೀರೆಯುಟ್ಟು ಅಲಂಕಾರಗೊಳ್ಳುತ್ತಾರೆ. ಬಿಜೆಪಿ ಕಾರ್ಯಕರ್ತರು ಮತಗಟ್ಟೆಗೆ ತೆರಳಿ ನೋಟಾ (NOTA-None of the Above=ಇವನ್ಯಾವನೂ ಸರಿಯ ಇಲ್ಲ!) ಒತ್ತಿ ಮನೆ ಸೇರುತ್ತಾರೆ. ರಾಜ್ಯ ಬಿಜೆಪಿಯನ್ನು ಮೋದಿಯವರೇ ಕಾಪಾಡಬೇಕು!

ನಾರದ ಸಂಚಾರ

ಅಭ್ಯಾಗತ

abhyagatha@yahoo.co.in

ಒಳ್ಳೆದರ ಜತೆಗೆ ಕೆಟ್ಟದನ್ನು ಕಲಿಸಿದ ಕಾಂಗ್ರೆಸ್

ಸ್ವಾತಂತ್ರ್ಯ ನಂತರದ 60 ವರ್ಷಗಳಲ್ಲಿ ಕಾಂಗ್ರೆಸ್ ಸರಕಾರ ಏನು ಮಾಡಿದೆ ಎಂಬುದು ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಬಿಸಿ ಬಿಸಿಯಾದ ಚರ್ಚೆಯ ವಿಷಯವಾಗಿದೆ. ರಾಜ್ಯಸಭೆಯ ನೂತನ ಸಂಸದರೊಂದಿಗಿನ ಸಂವಾದದ ಅಧಿವೇಶನದಲ್ಲಿ, ಕಾಂಗ್ರೆಸ್ ಮುಖ್ಯ ಸಚೇತಕ ಜೈರಾಮ್ ರಮೇಶ್, ಕಾಂಗ್ರೆಸ್ ಇತರ ಪಕ್ಷಗಳಿಗೆ ಒಳ್ಳೆಯ ಕೆಲಸಗಳನ್ನು ಹೇಗೆ ಮಾಡಬೇಕು ಎನ್ನುವುದರ ಜತೆಗೆ ಯಾವರೀತಿ ಕೆಟ್ಟ ಮಾರ್ಗವನ್ನು ಅನುಸರಿಸಬಾರದು ಎಂದು ಹೇಳಿದರು. ನಾಮನಿರ್ದೇಶಿತ ಸಂಸದರು ಪಕ್ಷಗಳನ್ನು ಸೇರುವ ಅಭ್ಯಾಸವು ಒಳ್ಳೆಯ ಬೆಳವಣಿಗೆಯಲ್ಲ, ಇದನ್ನು ಕಾಂಗ್ರೆಸ್ ಪ್ರಾರಂಭಿಸಿದೆ ಮತ್ತು ಈಗ ಬಿಜೆಪಿ ಅನುಸರಿಸುತ್ತಿದೆ. 1952 ರಿಂದ ರಾಜ್ಯಸಭೆಗೆ ಒಟ್ಟು 143 ಸಂಸದರು ನಾಮನಿರ್ದೇಶನಗೊಂಡಿದ್ದು, ಅದರಲ್ಲಿ 28 ಮಂದಿ ಸಂಸದರಾದ ನಂತರ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. ಕಳೆದ 10 ವರ್ಷಗಳಲ್ಲಿ ಅವರಲ್ಲಿ 16 ಮಂದಿ ಕಾಂಗ್ರೆಸ್ ಮತ್ತು 12 ಮಂದಿ ಬಿಜೆಪಿ ಸೇರಿದ್ದಾರೆ. ಹಾಗಾಗಿ ನಾಮನಿರ್ದೇಶಿತ ಸದಸ್ಯರಿಗೆ ಪಕ್ಷಗಳಿಗೆ ಸೇರಲು ಅವಕಾಶ ನೀಡುವ ನಿಬಂಧನೆಯನ್ನು ತೆಗೆದುಹಾಕುವಂತೆ ರಾಜ್ಯಸಭಾ ಅಧ್ಯಕ್ಷರನ್ನು ಪದೇ ಪದೇ ಒತ್ತಾಯಿಸಿದ್ದೇನೆ ಎಂದು ರಮೇಶ್ ಹೇಳಿದರು.

ರಾಜಕೀಯದ ಆಚೆಗಿನ ಸಂಬಂಧ

ಈ ಹಿಂದೆ ಲೋಕಸಭೆಯ ಖಜಾನೆ ಬೆಂಚ್‌ಗಳಲ್ಲಿ ಕುಳಿತುಕೊಳ್ಳುತ್ತಿದ್ದ ಶತ್ರುಘ್ನ ಸಿನ್ಹಾ ಈಗ ಪ್ರತಿ ಪಕ್ಷದ ಸ್ಥಾನದಲ್ಲಿ ಕುಳಿತಿದ್ದಾರೆ. ಆದರೆ ತೃಣಮೂಲ ಕಾಂಗ್ರೆಸ್‌ಗೆ ಸೇರಿ ಉಪಚುನಾವಣೆಯಲ್ಲಿ ಸಂಸದರಾಗಿ ಆಯ್ಕೆಯಾದ ನಂತರ ಅವರ ಜನಪ್ರಿಯತೆ ಮತ್ತು ಬಿಜೆಪಿ ಸಂಸದರೊಂದಿಗೆ ಅವರ ಆತ್ಮೀಯ ಸಂಬಂಧ ಕಡಿಮೆಯಾಗಿಲ್ಲ. ಕಳೆದ ವಾರ, ಸಿನ್ಹಾ ಕಾರಿಗಾಗಿ ಗೇಟ್ ಸಂಖ್ಯೆ 4ರಲ್ಲಿ ಕಾಯುತ್ತಿದ್ದಾಗ, ಗೋರಖ್‌ಪುರ ಬಿಜೆಪಿ ಸಂಸದ ಮತ್ತು ಭೋಜ್‌ಪುರಿ ನಟ ರವಿ ಕಿಶನ್ ಅವರನ್ನು ಗುರುತಿಸಿ 'ಶತ್ರುಭಾಯಿ' ಎಂದು ಕರೆದರು. ಸಿನ್ಹಾ ತಕ್ಷಣವೇ ಕಿಶನ್‌ನನ್ನು ಆತ್ಮೀಯವಾಗಿ ಸ್ವಾಗತಿಸಿ ಸಣ್ಣದಾಗಿ ಮಾತುಕತೆ ನಡೆಸಿದರು. ರವಿ ಕಿಶನ್ ಅವರನ್ನು ಕೇವಲ ಭೋಜ್‌ಪುರಿ ಸ್ಟಾರ್ ಎಂದು ಪರಿಗಣಿಸಬಾರದು, ಅವರು ವ್ಯಾಪ್ತಿ ಮೀರಿ ಬೆಳೆದಿದ್ದಾರೆ ಎಂದು ಸಿನ್ಹಾ ಸುದ್ದಿಗಾರರಿಗೆ ತಿಳಿಸಿದರು. ಕಾರಿಗೆ ಹತ್ತಿದ ನಂತರ ಬಿಜೆಪಿ ಸಂಸದರೊಟ್ಟಿಗೆ ಸಿನ್ಹಾ ಅವರು ಇರುವ ಫೋಟೋ ಸಿಗಬಹುದೆಂದು ಮಾಧ್ಯಮದವರು ಊಹಿಸಿದ್ದರು. ಗೋರಖ್‌ಪುರ ಸಂಸದರ ಕಾರು ಸ್ವಲ್ಪ ದೂರ ಸಾಗಿದ ನಂತರ ಸಿನ್ಹಾ ಅವರನ್ನು ಕಿಶನ್ ಮತ್ತೆ ಕರೆದರು. ಆಗ ಸಿನ್ಹಾ ಅವರು ಬಿಜೆಪಿ ಸಂಸದರ ಜತೆ ಫೋಟೋಗೆ ಪೋಸ್ ನೀಡಿದರು.

ನಾರಾಯಣ ನಾರಾಯಣ!

ಬಿಜೆಪಿಗೆ ಮತ್ತೆ ನೆನಪಾಗುತ್ತಿದ್ದಾರೆ ರಾಜಾಹುಲಿ! ಮೊನ್ನೆ ಮೊನ್ನೆ ತಾನೇ ಸಿದ್ದರಾಮೋತ್ಸವ ನೋಡಿ ಗಾಬರಿಗೊಂಡಿದ್ದ ಬಿಜೆಪಿಯವರಿಗೆ ಆಮ್ಲಜನಕದ ಥರ ಬಂದ ಅಮಿತ್ ಶಾ ಅವರು ಈ ಸಾರಿ ಪಾರ್ಟಿ ಗೆಲ್ಲಬೇಕೆಂದರೆ ರಾಜಾಹುಲಿಯನ್ನು ಬೋನಿಂದ ಹೊರಗೆ ಹಾಕಿ ಯುದ್ಧಕ್ಕೆ ನಿಲ್ಲಿಸಬೇಕು ಅಂದ್ರಂತೆ. ಅದಕ್ಕೆ ನಮ್ಮ ಸಿಎಂ ಬೊಮ್ಮಾಯಿ ಸರಿ ಅಂದ್ರಂತೆ. ಆದರೆ, ಯಾರಾದರೂ ಹೋಗಿ ಬಿಜೆಪಿಯ ಚುನಾವಣೆ ಸಾರಥ್ಯ ವಹಿಸಿಕೊಳ್ಳಿ ಅಂದರೆ 'ಸಿಎಂ ಸ್ಥಾನದಿಂದ ಕೆಳಗಿಳಿಸುವಾಗ ನನಗೆ ವಯಸ್ಸಾಗಿತ್ತು ಅಂದು, ಈಗೇನು ಕಡಿಮೆ ಆಗಿದ್ಯಾ ಅಂತ ಮುಖಕ್ಕೆ ಮಂಗಳಾರತಿ ಮಾಡಲು ಯಡಿಯೂರಪ್ಪ ನಿಂತಿದ್ದಾರೆ. ನಾರಾಯಣ ನಾರಾಯಣ!

ಜಸ್ಟಿಸ್ ಉದಯ್ ಲಲಿತ್ ಅತ್ಯುತ್ತಮ ನ್ಯಾಯದರ್ಶಿತ್ವದ ಪ್ರತೀಕ

ಜಸ್ಟಿಸ್ ಲಲಿತ್ ಅವರಿದ್ದ ನ್ಯಾಯಪೀಠ ಪೋಕ್ಸೋ ಕಾಯಿದೆಯ ಒಂದು ಪ್ರಕರಣದಲ್ಲಿ ಅಪ್ರಾಪ್ತ ವಯಸ್ಕರ ಮೇಲೆ ನಡೆಯುವ ಲೈಂಗಿಕ ಅಪರಾಧ ಕೇಸುಗಳನ್ನು ಇತ್ಯರ್ಥಪಡಿಸುವಾಗ ಬಾಧಿತ ವ್ಯಕ್ತಿ ಮತ್ತು ಆರೋಪಿಯ ನಡುವೆ ಯಾವುದೇ ದೈಹಿಕ ಸ್ಪರ್ಶ ಇರಲೇಬೇಕೆಂಬ ಕಡ್ಡಾಯವೇನಿಲ್ಲ ಎಂಬ ತೀರ್ಪನ್ನು ಕೊಟ್ಟಿದ್ದರು. ಬಾಂಬೆ ಹೈಕೋರ್ಟಿನ ಒಂದು ಪ್ರಕರಣವನ್ನು ನಿದರ್ಶನವಾಗಿಟ್ಟುಕೊಂಡು ಅತ್ಯುನ್ನತ ನ್ಯಾಯಾಲಯ ತಳೆದ ಅಭಿಪ್ರಾಯ ವಿಚಾರಾರ್ಹವಾಗಿತ್ತು. ಈ ಕಾಯಿದೆ ಇರುವುದು ಮಕ್ಕಳ ರಕ್ಷಣೆಗಾಗಿ, ಅವರ ಮೇಲೆ ನಡೆಯುವ ಲೈಂಗಿಕ ಕಿರುಕುಳಗಳನ್ನು ತಪ್ಪಿಸುವ ಸಲುವಾಗಿ. ಈ ರೀತಿಯ ಸಂಕೀರ್ಣ ವ್ಯಾಖ್ಯಾನಗಳನ್ನು ಮಾಡುತ್ತ ಹೋದರೆ ಕಾಯಿದೆಯ ಮೂಲ ಉದ್ದೇಶಕ್ಕೇ ಧಕ್ಕೆಯಾಗಬಹುದು ಎಂಬ ಅಭಿಪ್ರಾಯವೂ ಬಂದಿತ್ತು.

ಕಳೆದ ವರ್ಷ ಕೋವಿಡ್ ಕಾರಣದಿಂದಾಗಿ ದೇಶವೇ ತತ್ತರಗೊಂಡಿತ್ತು. ಸರ್ವೋಚ್ಚ ನ್ಯಾಯಾಲಯದ ಕಾರ್ಯನಿರ್ವಹಣೆ ಕೂಡ 2021ರಲ್ಲಿ ಏಳುತಿಂಗಳ ಕಾಲ ಆನ್‌ಲೈನ್ ಮೂಲಕವೇ ನಡೆದಿದ್ದವು. ದೈಹಿಕವಾಗಿ ಮುಖಾಮುಖಿಯಾಗುವ ಸಂದರ್ಭವೇ ಇರಲಿಲ್ಲ. ಕಳೆದ ಅಕ್ಟೋಬರ್‌ನಲ್ಲಿ ಕೋರ್ಟುಗಳಿಗೆ ಜನರ ಪ್ರವೇಶ ಮುಕ್ತಗೊಳಿಸಿದಾಗ ಎಲ್ಲೆಡೆ ಗ್ಲಾಸ್ ತಡೆಗೋಡೆಗಳ ನಿರ್ಮಾಣ ಮಾಡಲಾಗಿತ್ತು, ಆಗಮಿಸುವ ಜನರ ಸಂಖ್ಯೆಯ ಬಗ್ಗೆಯೂ ನಿಯಂತ್ರಣವಿತ್ತು, ಜತೆಗೆ ಕಡ್ಡಾಯ ನಿಯಮಪಾಲನೆ ಕೂಡ ಅಗತ್ಯವಾಗಿತ್ತು.

2021ರ ಅಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ಸುಪ್ರೀಂ ಕೋರ್ಟಿನ ಒಬ್ಬ ನ್ಯಾಯಾಧೀಶರು 42 ದಿನಗಳ ಕಾಲ 16 ರಾಜ್ಯಗಳಲ್ಲಿ ಸಂಚರಿಸಿದರು. ಲಢಾಕ್‌ನಿಂದ ಕನ್ಯಾಕುಮಾರಿಯ ತನಕ, ಕಛ್‌ನಿಂದ ಮಿಝೋರಾಮ್ ತನಕ, ಎಲ್ಲೆಡೆ ಅವರು ಸಂಚರಿಸಿದ್ದರು. ಭಾರತದ ಅತ್ಯಂತ ದುರ್ಗಮ ಪ್ರದೇಶಗಳಿಗೂ ಅವರು ಹೋಗಿಬಂದರು. ಜನರಿಗೆ ಕಾನೂನು ನೆರವನ್ನು ಸುವ್ಯವಸ್ಥಿತವಾಗಿ ಒದಗಿಸುವುದು ಅವರ ಈ ಪ್ರಯಾಣದ ಮುಖ್ಯ ಉದ್ದೇಶವಾಗಿತ್ತು. ಅವರು ಬೇರಾರೂ ಅಲ್ಲ, ಸುಪ್ರೀಂ ಕೋರ್ಟಿನ ಜಸ್ಟಿಸ್ ಉದಯ್ ಯು.ಲಲಿತ್. ಅವರೀಗ ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಗಳಾಗಿ ನಿಯುಕ್ತರಾಗಿದ್ದಾರೆ.

ಪ್ರಾರಂಭದ ದಿನಗಳು

1957ರಲ್ಲಿ ಜನಿಸಿದ ಜಸ್ಟಿಸ್ ಲಲಿತ್ ತಂದೆ ಖ್ಯಾತ ಕ್ರಿಮಿನಲ್ ವಕೀಲರಾಗಿದ್ದ ಯು.ಆರ್.ಲಲಿತ್. ಅವರು ಬಾಂಬೆ ಹೈಕೋರ್ಟಿನಲ್ಲಿ ನ್ಯಾಯಾಧೀಶರೂ ಆಗಿದ್ದವರು. ತಂದೆಯ ಹಾದಿಯಲ್ಲೇ ಸಾಗಿ 1983ರಲ್ಲಿ ವಕೀಲರಾಗಿ ನೋಂದಾವಣೆಗೊಂಡ ಜಸ್ಟಿಸ್ ಲಲಿತ್ 1985ರ ತನಕ ಬಾಂಬೆ ಹೈಕೋರ್ಟಿನಲ್ಲಿ ವಕೀಲಿಕೆ ಮಾಡಿದ್ದರು. ನಂತರ ಅವರು ದೆಹಲಿಗೆ ಸ್ಥಳಾಂತರಗೊಂಡರು. ಅಟಾರ್ನಿ ಜನರಲ್ ಆಗಿ ಖ್ಯಾತರಾದ ಸೋಲಿ ಸೊರಾಬ್ಜಿಯವರ ಜತೆ 1986 ಮತ್ತು 1992ರ ನಡುವೆ ಅವರು ಕೆಲಸ ಮಾಡುವ ಅವಕಾಶ ಪ್ರಾಪ್ತವಾಯಿತು. 2004ರಲ್ಲಿ ಲಲಿತ್ ಅವರು ಸುಪ್ರೀಂ ಕೋರ್ಟಿನ ಹಿರಿಯ ನ್ಯಾಯವಾದಿಯಾಗಿ ಗುರುತಿಸಿಕೊಂಡರು.

ವಕೀಲರಾಗಿ ಜಸ್ಟಿಸ್ ಲಲಿತ್, ತಾವು ವಹಿಸಿಕೊಂಡ ಪ್ರಕರಣದ ಸಾದ್ಯಂತ ಮಾಹಿತಿ ಪ್ರಸ್ತುತ ಪಡಿಸುವಲ್ಲಿ ಹೆಸರಾಗಿದ್ದವರು. ಅದಕ್ಕೆ ಬಹುಮುಖ್ಯ ಕಾರಣ ಅವರಲ್ಲಿದ್ದ ಅಪಾರವಾದ ತಾಳ್ಮೆ. ಸುಪ್ರೀಂ ಕೋರ್ಟಿನ ಮುಂದೆ ಅವರು ಮಾಡುತ್ತಿದ್ದ ವಾದಮಂಡನೆಯೂ ವಿಶೇಷವಾಗಿರುತ್ತಿತ್ತು. ಕ್ಲಿಷ್ಟಕರವಾದ ಮತ್ತು ಸಂವೇದನಾಶೀಲ ಪ್ರಕರಣಗಳಲ್ಲಿ ವಾದ ಮಾಡುವಾಗ ಯಾವುದೇ ಭಾವಾತಿರೇಕಗಳಿಗೆ ಒಳಗಾಗದೇ ಅವರು ವಾದ ಮಾಡುತ್ತಿದ್ದ ಚರ್ಯೆ ಎಲ್ಲರ ಗಮನ ಸೆಳೆದಿತ್ತು. ಪಂಜಾಬಿನ ಪೂರ್ವ ಮುಖ್ಯಮಂತ್ರಿ ಅಮರಿಂದರ್‌ಸಿಂಗ್ ಸೇರಿದಂತೆ ಹಲವಾರು ರಾಜಕಾರಣಿಗಳಿಗೆ, ಸಲ್ಮಾನ್ ಖಾನ್ ಸೇರಿದಂತೆ ಹಲವು ಚಿತ್ರನಟರಿಗೆ ಸಂಬಂಧಪಟ್ಟ ಪ್ರಕರಣಗಳಲ್ಲಿ ವಕೀಲರಾಗಿ ಲಲಿತ್ ಅವರು ನಡೆದುಕೊಂಡ ರೀತಿ ದೇಶದ ಗಮನ ಸೆಳೆದಿತ್ತು. ಅವರ ಸಾಮರ್ಥ್ಯ ಮತ್ತು ಸಮಗ್ರತೆಗಳನ್ನು ಗಮನಿಸಿದ ಸುಪ್ರೀಂ ಕೋರ್ಟು 2011ರಲ್ಲಿ ಅವರನ್ನು 2ಜಿ ಸ್ಪೆಕ್ಟ್ರಮ್ ಪ್ರಕರಣದಲ್ಲಿ ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕ ಮಾಡಿತು. ನ್ಯಾಯೋಚಿತ ಕಾನೂನು ನಡವಳಿಕೆ ನಡೆಯಬೇಕೆನ್ನುವುದು ಈ ನೇಮಕದ ಹಿಂದಿನ ಉದ್ದೇಶವಾಗಿತ್ತು. ಕೇಂದ್ರ ಸರಕಾರ ಬೇರೊಬ್ಬ ವ್ಯಕ್ತಿಯನ್ನು ಆ ಸ್ಥಾನಕ್ಕೆ ನೇಮಕ ಮಾಡಬೇಕೆಂಬ ಪ್ರಸ್ತಾಪ ಮುಂದಿಟ್ಟಾಗ ಸುಪ್ರೀಂ ಕೋರ್ಟು ಅದನ್ನು ನಿರಾಕರಿಸಿದ್ದಲ್ಲದೇ ಹಿರಿಯ ವಕೀಲರಾದ ಲಲಿತ್ ಅವರನ್ನು ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ಪರ ವಕಾಲತ್ತು ವಹಿಸುವ ಜವಾಬ್ದಾರಿಯನ್ನೂ ಕೊಡಲಾಯ್ತು. ಹಲವಾರು ಪ್ರಕರಣಗಳಲ್ಲಿ ನ್ಯಾಯಾಧಿಕರಣದ ಪ್ರತಿನಿಧಿಯಾಗಿ ಕಾಣಿಸಿಕೊಂಡಿದ್ದ ಲಲಿತ್ ಅವರು ಎರಡು ಅವಧಿಗೆ ಸುಪ್ರೀಂ ಕೋರ್ಟಿನ ಕಾನೂನು ಸೇವಾ ಸಮಿತಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು.

ನ್ಯಾಯಾಧೀಶರಾಗಿ

ಆಗಸ್ಟ್ 2014ರಲ್ಲಿ, ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿ ಬಡ್ತಿ ಪಡೆದ ಲಲಿತ್ ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ನೇರವಾಗಿ ಅತ್ಯುನ್ನತ ನ್ಯಾಯಾಲಯದಿಂದ ನೇರ ನೇಮಕವಾದ ಆರನೇ ನ್ಯಾಯಾಧೀಶರೆಂಬ ಅಭಿದಾನಕ್ಕೆ ಪಾತ್ರರಾದರು. ಈ ಹುದ್ದೆಯ ಪ್ರಾರಂಭದ ದಿನಗಳಿಂದಲೇ ಅವರು ಅಳಿಸಲಾಗದ ಮಹತ್ವಪೂರ್ಣ ಮತ್ತು ಚರಿತ್ರಾರ್ಹ ದಾಖಲೆಗಳನ್ನು ಮಾಡುತ್ತ ಬಂದರು. ಸುಪ್ರೀಂ ಕೋರ್ಟ್ ಸಮುಚ್ಚಯದ ಒಂದು ಮೂಲೆಯಲ್ಲಿ ಸದ್ದಿಲ್ಲದೇ ತಮ್ಮ ಕಾರ್ಯದಲ್ಲಿ ತೊಡಗಿರುತ್ತಿದ್ದ ಲಲಿತ್ ಮತ್ತು ಅವರ ಜತೆಗಾರರಾಗಿದ್ದ ಜಸ್ಟಿಸ್ ಆದರ್ಶ ಕೆ. ಗೋಯಲ್ ಅವರ ನ್ಯಾಯಪೀಠ ಹಲವು ಮಹತ್ವಪೂರ್ಣ ತೀರ್ಪುಗಳಿಗೆ ಸಾಕ್ಷಿಯಾಯಿತು.

2017ರಲ್ಲಿ ಜಾರಿಮಾಡಲ್ಪಟ್ಟ ಒಂದು ಚರಿತ್ರಾರ್ಹ ತೀರ್ಪಿನ ಮೂಲಕ ಕೋರ್ಟ್ ಹಾಲ್‌ಗಳಿಗೆ ಕ್ಯಾಮೆರಾಗಳನ್ನು ತರುವಲ್ಲಿದ್ದ ಅದೆಷ್ಟೋ ವರ್ಷಗಳ ನಿರ್ಬಂಧವನ್ನು ಮುರಿದು ಮೊದಲಬಾರಿಗೆ ದೇಶದ ಎಲ್ಲ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕನಿಷ್ಠ ಎರಡು ಜಿಲ್ಲಾ ನ್ಯಾಯಾಲಯಗಳಲ್ಲಿ ಸಿಸಿಟಿವಿ ಅಳವಡಿಕೆಗೆ ದಾರಿಕೊಟ್ಟರು.

2017ರಲ್ಲೇ ಜಾರಿಯಾದ ಇನ್ನೊಂದು ತೀರ್ಪಿನ ಮೂಲಕ ಎಲ್ಲ ಪ್ರಕರಣಗಳ, ವಿಶೇಷತಃ ಜಾಮೀನು ಪ್ರಕರಣಗಳ ತ್ವರಿತ ವಿಲೇವಾರಿಗೆ ಒತ್ತುಕೊಡಲಾಯ್ತು. ಸಮಾಜದ ಸೇವೆಗೆ ನ್ಯಾಯಾಂಗ ವ್ಯವಸ್ಥೆ ಒಂದು ಉದ್ದೇಶವನ್ನು ಒದಗಿಸುವ ಅಂಗ. ಈ ಉದ್ದೇಶ ಈಡೇರದೇ ಇದ್ದಲ್ಲಿ, ಪ್ರಕರಣದ ದೂರುದಾರ ನ್ಯಾಯಕ್ಕಾಗಿ ದೀರ್ಘಕಾಲ ಸರತಿಸಾಲಿನಲ್ಲಿ ಕಾಯಬೇಕಾದ ಪ್ರಸಂಗ ಎದುರಾದರೆ ಅದಕ್ಕಿಂತ ದೊಡ್ಡ ಪ್ರಮಾದ ಇನ್ನೊಂದಿಲ್ಲ ಎಂಬುದು ಅವರ ವಾದಮಂಡನೆಯಾಗಿತ್ತು.

ಜುಲೈ-2017ರಲ್ಲಿ ಜಸ್ಟಿಸ್ ಲಲಿತ್ ಅವರಿದ್ದ ನ್ಯಾಯಪೀಠ ವರದಕ್ಷಿಣೆ ವಿರುದ್ಧದ ಪ್ರಕರಣಗಳಲ್ಲಿ ತ್ವರಿತ ದಸ್ತಗಿರಿಗೆ ಒತ್ತು ನೀಡುವ ತೀರ್ಪನ್ನು ಕೊಟ್ಟಿತ್ತು. ಭಾರತೀಯ ದಂಡಸಂಹಿತೆಯ ವಿಧಿ 498ಎ ಅಡಿಯಲ್ಲಿ ವರದಕ್ಷಿಣೆಗಾಗಿ ನಡೆಯುವ ಕ್ರೌರ್ಯದ ವಿಚಾರ ಬಂದಾಗ ಅದು ಸಾಮಾನ್ಯ ಪ್ರಕರಣವೆಂದು ಪರಿಗಣಿಸಲಾಗದು. ಮುಗ್ಧಜನರ ಮಾನವಹಕ್ಕುಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕೆಂಬ ತೀರ್ಪು ಅವರದಾಗಿತ್ತು. ಪ್ರತಿ ಜಿಲ್ಲೆಯಲ್ಲೂ ಕುಟುಂಬ ಕಲ್ಯಾಣ ಸಮಿತಿಗಳ ರಚನೆಯಾಗಬೇಕು ಮತ್ತು ಪೊಲೀಸರಿಗೆ ಅಥವಾ ಕೋರ್ಟಿನ ಮುಂದೆ ಬರುವ ಫಿರ್ಯಾದುಗಳನ್ನು ಈ ಸಮಿತಿಯ ಅವಗಾಹನೆಗೆ ತರತಕ್ಕದ್ದು ಎಂಬ ಅಂಶವನ್ನು ಅವರು ಎತ್ತಿಹಿಡಿದಿದ್ದರು. ಇನ್ನೊಂದು ಚರಿತ್ರಾರ್ಹ ತೀರ್ಪು ಆಗಸ್ಟ್ 22, 2017ರಲ್ಲಿ ಹೊರಬಿತ್ತು. ಅದರಂತೆ ತ್ರಿವಳಿ ತಲಾಖ್ ಕುರಿತಾಗಿ ಮಹತ್ವದ ತೀರ್ಪನ್ನು ಅವರು ಕೊಟ್ಟಿದ್ದರು. ಐದು ಜನರಿದ್ದ ನ್ಯಾಯಪೀಠದಲ್ಲಿ ಜಸ್ಟಿಸ್ ಲಲಿತ್ ಕೂಡ ಒಬ್ಬರಾಗಿದ್ದರು. ಮುಸ್ಲಿಂ ವೈಯ್ಯಕ್ತಿಕ ಕಾಯಿದೆ (ಶರಿಂಜಿಢಜಿತ್) 1937ರ ವಿಧಿ-2ರಲ್ಲಿರುವ ವಿಚ್ಛೇದನ ಕುರಿತಾದ ಉಲ್ಲೇಖಗಳನ್ನು ಅನೂರ್ಜಿತ ಎಂದು ಪರಿಗಣಿಸತಕ್ಕದ್ದು ಎಂದು ಜಸ್ಟಿಸ್ ಲಲಿತ್ ಅವರು ಜಸ್ಟಿಸ್ ಆರ್.ಎಫ್.ನಾರಿಮನ್ ಮತ್ತು ಕುರಿಯನ್ ಜೋಸೆಫ್ ಜೊತೆಗೂಡಿ ತೀರ್ಪು ಕೊಟ್ಟಿದ್ದರು. ನವೆಂಬರ್ 2021ರಲ್ಲಿ ಜಾರಿಯಾದ ಇನ್ನೊಂದು ಚರಿತ್ರಾರ್ಹ ತೀರ್ಪು ವಿಶೇಷವಾದದ್ದು. ಜಸ್ಟಿಸ್ ಲಲಿತ್ ಅವರಿದ್ದ ನ್ಯಾಯಪೀಠ ಪೋಕ್ಸೋ ಕಾಯಿದೆಯ ಒಂದು ಪ್ರಕರಣದಲ್ಲಿ ಅಪ್ರಾಪ್ತ ವಯಸ್ಕರ ಮೇಲೆ ನಡೆಯುವ ಲೈಂಗಿಕ ಅಪರಾಧ ಕೇಸುಗಳನ್ನು ಇತ್ಯರ್ಥಪಡಿಸುವಾಗ ಬಾಧಿತ ವ್ಯಕ್ತಿ ಮತ್ತು ಆರೋಪಿಯ ನಡುವೆ ಯಾವುದೇ ದೈಹಿಕ ಸ್ಪರ್ಶ ಇರಲೇಬೇಕೆಂಬ ಕಡ್ಡಾಯವೇನಿಲ್ಲ ಎಂಬ ತೀರ್ಪನ್ನು ಕೊಟ್ಟಿದ್ದರು. ಬಾಂಬೆ ಹೈಕೋರ್ಟಿನ ಒಂದು ಪ್ರಕರಣವನ್ನು ನಿದರ್ಶನವಾಗಿಟ್ಟುಕೊಂಡು ಅತ್ಯುನ್ನತ ನ್ಯಾಯಾಲಯ ತಳೆದ ಅಭಿಪ್ರಾಯ ವಿಚಾರಾರ್ಹವಾಗಿತ್ತು. ಈ ಕಾಯಿದೆ ಇರುವುದು ಮಕ್ಕಳ ರಕ್ಷಣೆಗಾಗಿ, ಅವರ ಮೇಲೆ ನಡೆಯುವ ಲೈಂಗಿಕ ಕಿರುಕುಳಗಳನ್ನು ತಪ್ಪಿಸುವ ಸಲುವಾಗಿ. ಈ ರೀತಿಯ ಸಂಕೀರ್ಣ ವ್ಯಾಖ್ಯಾನಗಳನ್ನು ಮಾಡುತ್ತ ಹೋದರೆ ಕಾಯಿದೆಯ ಮೂಲ ಉದ್ದೇಶಕ್ಕೇ ಧಕ್ಕೆಯಾಗಬಹುದು ಎಂಬ ಅಭಿಪ್ರಾಯವೂ ಬಂದಿತ್ತು. ಜಸ್ಟಿಸ್ ಲಲಿತ್ ಅವರ ನೇತೃತ್ವದ ನ್ಯಾಯಪೀಠ ಸ್ವಯಂಪ್ರೇರಿತವಾಗಿ ವಿಚಾರವೊಂದನ್ನು ಎತ್ತಿಕೊಂಡು ದೇಶದಲ್ಲಿ ಮರಣದಂಡನೆ ಪ್ರಕರಣಗಳನ್ನು ನ್ಯಾಯಾಲಯಗಳು ಕೈಬಿಟ್ಟಿವೆ, ಈ ನಿಟ್ಟಿನಲ್ಲಿ ಕ್ರಿಮಿನಲ್ ಪ್ರಕರಣಗಳಲ್ಲಿ ನ್ಯಾಯದಾನ ಮಾಡುವ ತ್ವರಿತ ಕ್ರಮಕ್ಕೆ ಮುಂದಾಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಮರಣದಂಡನೆಗೆ ಒಳಗಾಗಬೇಕಾದ ವ್ಯಕ್ತಿಯ ಸಾಮಾಜಿಕ ಆರ್ಥಿಕ, ಮಾನಸಿಕ ಮತ್ತು ಮನೋವೈಜ್ಞಾನಿಕ ಸ್ಥಿತಿಯನ್ನು ಅರಿತುಕೊಂಡು ಕ್ರಮಜರುಗಿಸುವ ಒಂದು ಪ್ರಕ್ರಿಯೆ ಅಸ್ತಿತ್ವಕ್ಕೆ ಬರಬೇಕು ಎಂದೂ ಅಭಿಪ್ರಾಯಿಸಿತು.

ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ ತಡೆಗೆ ಇರುವ 2005ರ ಕಾಯಿದೆಯ ಕುರಿತಾಗಿ ತಮ್ಮ ಮುಂದೆ ಬಂದಿದ್ದ ಒಂದು ಸಾರ್ವಜನಿಕ ಹಿತಾಸಕ್ತಿ ದೂರನ್ನು ಪರಿಗಣಿಸಿದ ಜಸ್ಟಿಸ್ ಲಲಿತ್ ಅವರ ಪೀಠ, ಕ್ರೌರ್ಯ ಮತ್ತು ಶೋಷಣೆಗೆ ಒಳಗಾದ ಮಹಿಳೆಯರಿಗೆ ರಕ್ಷಣೆ ಕೊಡುವ ವ್ಯವಸ್ಥೆ, ವಸತಿಗೆ ಸೂರುಕೊಡುವ ವ್ಯವಸ್ಥೆಯ ಬಗ್ಗೆಯೂ ತೀರ್ಪಿತ್ತು ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದ್ದರು.

ಕಾನೂನು ಸುಧಾರಣೆ

ಮೇ-2021ರಲ್ಲಿ ಜಸ್ಟಿಸ್ ಲಲಿತ್ ಅವರು ನ್ಯಾಶನಲ್ ಲೀಗಲ್ ಸರ್ವಿಸ್ ಅಥಾರಿಟಿ (ನಾಲ್ಸಾ) ಕಾರ್ಯಕಾರಿ ಅಧ್ಯಕ್ಷರಾಗಿ ನೇಮಕಗೊಂಡರು. ಸಾಂಕ್ರಾಮಿಕ ರೋಗದ ಭೀತಿಯ ನಡುವೆಯೂ ಭಾರತದಲ್ಲಿ ಕಾನೂನು ನ್ಯಾಯದಾನ ಸುಧಾರಣೆ ಅತ್ಯುತ್ತಮವಾಗಿ ಜಾರಿಗೆ ಬರಲಿದೆ ಎಂಬ ಸಾರ್ವಜನಿಕ ಅಭಿಪ್ರಾಯ ಆಗಲೇ ಹರಳುಗಟ್ಟಿತ್ತು. ತಾವು ಅಧಿಕಾರ ಗ್ರಹಣ ಮಾಡಿದಾಕ್ಷಣದಿಂದಲೇ ಜಸ್ಟಿಸ್ ಲಲಿತ್ ಅವರು ತಡಮಾಡದೇ ಎಲ್ಲ ರಾಜ್ಯಮಟ್ಟದ ಸಮಿತಿಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳೊಂದಿಗೆ. ಆನ್‌ಲೈನ್ ಸಭೆಗಳನ್ನು ನಿರಂತರವಾಗಿ ನಡೆಸಿದ್ದಲ್ಲದೇ ಕಾನೂನು ನೆರವನ್ನು ಸಕ್ರಿಯಗೊಳಿಸುವಲ್ಲಿ ಇರುವ ತೊಂದರೆ ಮತ್ತು ಸವಾಲುಗಳ ಬಗ್ಗೆಯೂ ಸಾದ್ಯಂತ ತಿಳಿದುಕೊಂಡರು. ಕಾನೂನು ಸಮಸ್ಯೆ ಬಂದಾಗ ಸಾಮಾನ್ಯ ವ್ಯಕ್ತಿಯೊಬ್ಬ ಯಾರನ್ನು ಸಂಪರ್ಕಿಸಬೇಕು, ಹೇಗೆ ಮುಂದುವರಿಯಬೇಕು, ನ್ಯಾಯಪಡೆಯುವುದು ಹೇಗೆ ಎಂಬ ಕುರಿತಾದ ವ್ಯಾಪಕ ಚರ್ಚೆಗಳೂ ಆದವು.

ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರತಿ ವಾರಾಂತ್ಯದಲ್ಲಿ ಜಸ್ಟಿಸ್ ಲಲಿತ್ ಅವರು ದೇಶದ ನಾನಾ ಭಾಗಗಳಿಗೆ ಪ್ರವಾಸ ಹೋಗುವುದನ್ನು ಆರಂಭಿಸಿದರು. ಅಕ್ಟೋಬರ್-ನವೆಂಬರ್ 2021ರಲ್ಲಿ ಈ ರೀತಿಯ ಆರು ವಾರಾಂತ್ಯಗಳಲ್ಲಿ ಅವರು ವ್ಯಾಪಕವಾಗಿ ಭಾರತದಾದ್ಯಂತ ಪ್ರಯಾಣ ಕೈಗೊಂಡರು. 42 ದಿನಗಳಲ್ಲಿ 16 ರಾಜ್ಯಗಳಲ್ಲಿ ಸಂಚರಿಸಿದರು 15 ಲಕ್ಷ ಗ್ರಾಮಗಳ ಜನರೊಂದಿಗೆ ಸಂವಹನ ನಡೆಸಿದರು. ಕಾನೂನು ಜಾಗೃತಿಯ ಸಂದೇಶವನ್ನು ಮನೆಮನೆಗೆ ತಲುಪಿಸುವ ಉದ್ದೇಶದಿಂದ 464000 ಜಾಗೃತಿ ಕಾರ್ಯಕ್ರಮಗಳು ನಡೆದು ಆರುಕೋಟಿ ಮೂವತ್ತು ಲಕ್ಷ ಜನರೊಂದಿಗೆ ಸಂವಹನ ಸಾಧ್ಯವಾಯ್ತು.

2021ರಲ್ಲಿ ಹಿಂದುಸ್ತಾನ್ ಟೈಮ್ಸ್ ಲೀಡರ್ ಶಿಪ್ ಸಮಾರಂಭದಲ್ಲಿ ಮಾತನಾಡುತ್ತಿದ್ದ ಜಸ್ಟಿಸ್ ಲಲಿತ್ ಜನರಿಗೆ ಗುಣಮಟ್ಟದ ಕಾನೂನು ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಆಗಬೇಕಾದ ಪ್ರಕ್ರಿಯೆಗಳ ಕುರಿತು ಮತ್ತು ಜನರ ವಿಶ್ವಾಸಾರ್ಹತೆಯನ್ನು ಗಳಿಸುವ ದಿಸೆಯಲ್ಲಿ ಆರ್ಥಿಕವಾಗಿ ಹಿಂದುಳಿದವರು, ದೈಹಿಕವಾಗಿ ಸವಾಲುಗಳಿರುವವರು ಮತ್ತು ಮಂಗಳಮುಖಿಯರೂ ಸೇರಿದಂತೆ ಎಲ್ಲರನ್ನು ಒಳಗೊಳ್ಳಿಸುವ ಯತ್ನ ಆಗಬೇಕಿದೆ, ಕಾನೂನು ವಿಚಾರದಲ್ಲಿ ಯಾರೂ ಅವಕಾಶ ವಂಚಿತರಾಗಬಾರದು ಎಂದರು. ಸಮಾಜದಲ್ಲಿ ನಾಯಕತ್ವ ವಹಿಸಿರುವವರೆಲ್ಲರೂ ಈ ನಿಟ್ಟಿನಲ್ಲಿ ಕೈಜೋಡಿಸಬೇಕೆಂದು ಅವರು ಅಭಿಪ್ರಾಯಿಸಿದರು.

ಕಳೆದ ವಾರ ಅಖಿಲಭಾರತ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಥಮ ಸಭೆ ದೆಹಲಿಯಲ್ಲಿ ನಡೆದಾಗ ಮಾತನಾಡಿದ ಜಸ್ಟಿಸ್ ಲಲಿತ್, ತಾವು ಅಧಿಕಾರ ವಹಿಸಿಕೊಂಡ ನಂತರದಲ್ಲಿ, ವಿಚಾರಣಾಪೂರ್ವ ಹಂತದಲ್ಲಿಯೇ 3 ಕೋಟಿ ಪ್ರಕರಣಗಳು ಲೋಕ ಅದಾಲತ್ತಿನಲ್ಲಿ ಇತ್ಯರ್ಥವಾಗಿರುವ ಬಗ್ಗೆ ತಿಳಿಸಿದ್ದರು. ಈಗಾಗಲೇ ನ್ಯಾಯಾಲಯಗಳು ಪ್ರಕರಣಗಳ ದಟ್ಟಣೆಯಿಂದ ತೊಂದರೆಗೊಳಗಾಗಿ ನ್ಯಾಯದಾನ ವಿಳಂಬವಾಗುತ್ತಿರುವುದರ ಹಿನ್ನೆಲೆಯಲ್ಲಿ ಇದೊಂದು ಸಕಾರಾತ್ಮಕ ಉಪಕ್ರಮವೂ ಆಗಿದೆ.

ಜಸ್ಟಿಸ್ ಎನ್.ವಿ. ರಮಣ ಅವರು ನಿವೃತ್ತರಾಗುತ್ತಿರುವ ಭಾರತದ ಮುಖ್ಯ ನ್ಯಾಯಮೂರ್ತಿಗಳ ಸ್ಥಾನಕ್ಕೆ, ಆಗಸ್ಟ್ 27ರಂದು ಜಸ್ಟಿಸ್ ಲಲಿತ್ ಅಧಿಕಾರಗ್ರಹಣ ಮಾಡಲಿದ್ದಾರೆ.



ಅಚ್ಚುಕಟ್ಟು ಪ್ರದೇಶ
RNI : KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol: 7, Issue:223